4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಮೈಸೂರು

ಎಸ್. ಸಿ. ಸಂಃ 34/2018

ಫಿರ್ಯಾದಿ ರಾಜ್ಯದ ಪರವಾಗಿ ಉದಯಗಿರಿ ಪೊಲೀಸ್ ಠಾಣೆ,

ವಿರುದ್ಧ

ಆರೋಪಿತರು ಶ್ರೀ ಅಬೀದ್ ಪಾಷ ಮತ್ತು ಇತರರು

# ಹೆಚ್ಚುವರಿ ದೋಷಾರೋಪಣೆ

ನಾನು ಶ್ರೀ ಎಸ್.ಟಿ.ದೇವರಾಜ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ ಕೆಳಕಂಡ ಆರೋಪಿತರಾದ

1) ಅಬೀದ್ ಪಾಷ @ ಭಯ್ಯ @ ಇಬ್ರಾಹಿಂ @ ಉಸ್ಮಾನ್,
2) ಮಹ್ಮದ್ ಹಮೀದ್ ಖಾನ್ @ ಹಮೀದ್,
3) ಅಯೂಬ್ ಖಾನ್ @ ಅಯೂಬ್
4) ಸೈಯದ್ ಮುಹೀಬ್ @ ಮುಹೀಬ್
5) ಮಹ್ಮದ್ ಹನೀಫ್ @ ಹನೀಫ್ ಬೈ,

ನಿಮ್ಮ ಮೇಲೆ ಹೊರಿಸುವ ಹೆಚ್ಚುವರಿ ದೋಷಾರೋಪಣೆ ಏನೆಂದರೆಃ

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ, 9 ನೇ ಆರೋಪಿಯು ಪಿ.ಎಫ್.ಐ. ಸಂಘಟನೆಯ ಕಾರ್ಯಕರ್ತನಾಗಿದ್ದು , 1 ನೇ ಆರೋಪಿಯಾದ ನಿಮ್ಮನ್ನು ಭೇಟಿಯಾಗಿದ್ದು, ನಿಮ್ಮ ಕೋಮಿನ ಜನಾಂಗದ ವಿರುದ್ಧ ಧ್ವನಿ

ಎತ್ತುತ್ತಿದ್ದ ಆರ್.ಎಸ್.ಎಸ್. ರಾಜುವನ್ನು ಕೊಲೆ ಮಾಡುವಂತೆ ಸೂಚನೆ ನೀಡಿದ್ದರ ಮೇರೆಗೆ, 1 ರಿಂದ 5 ನೇ ಆರೋಪಿಗಳಾದ ನೀವುಗಳು 10 ನೇ ಆರೋಪಿಯೊಂದಿಗೆ ಸೇರಿ ಮೈಸೂರಿನ ಕ್ಯಾತಮಾರನ ಹಳ್ಳಿಯ ಆರ್.ಎಸ್.ಎಸ್. ಸಂಘಟನೆಯ ಮುಖಂಡನಾದ ರಾಜು @ ಆರ್.ಎಸ್.ಎಸ್. ರಾಜುವನ್ನು ಕೊಲೆ ಮಾಡಲು ಅಪರಾಧಿಕ ಒಳಸಂಚು ನಡೆಸಿ , ಕೊಲೆ ಮಾಡಲು ಅಗತ್ಯವಿರುವ ಮಚ್ಚನ್ನು 10 ನೇ ಆರೋಪಿಯು ತನ್ನ ಮನೆಯಿಂದ 1 ನೇ ಆರೋಪಿಯಾದ ನಿಮಗೆ ತಂದು ಕೊಟ್ಟಿದ್ದು, ದಿಃ 12.08.2015 ರ ರಾತ್ರಿ ಮೈಸೂರು ನಗರದ ದೇವರಾಜ ಪೊಲೀಸ್ ಠಾಣಾ ಸರಹದ್ದಿನ ಕೆ.ಆರ್. ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದ ಬಳಿ ನಿಂತಿದ್ದ ಸಾಕ್ಷಿ 84 ಶ್ರೀ ಮಲ್ಲಿಕಾರ್ಜುನರವರ ಬಾಬ್ತು ಒಂದು ಕಪ್ಪು ಬಣ್ಣದ ಟಿವಿಎಸ್ ದ್ವಿಚಕ್ರ ವಾಹನ ಸಂಃ ಕೆಎ 09 ಇಜೆ 0676 ಅನ್ನು ಕಳವು ಮಾಡಿ , ಅದನ್ನು 1 ನೇ ಆರೋಪಿಯಾದ ನಿಮಗೆ ನೀಡಿ, ಆರ್.ಎಸ್.ಎಸ್. ರಾಜುವನ್ನು ಕೊಲೆ ಮಾಡಲು ಬಳಸಿಕೊಂಡು, ಕೊಲೆ ಮಾಡಿದ ನಂತರ ಸದರಿ ವಾಹನವನ್ನು ನಾಶಪಡಿಸುವಂತೆ ಸೂಚಿಸಿದ್ದು, ಅದರಂತೆ ದಿನಾಂಕಃ 13.03.2016 ರಂದು 1 ಮತ್ತು 2 ನೇ ಆರೋಪಿಗಳಾದ ನೀವುಗಳು 10 ನೇ ಆರೋಪಿಯು ಕಳವು ಮಾಡಿ ನೀಡಿದ್ದ ಟಿವಿಎಸ್ ವಿಕ್ಟರ್ ದ್ವಿಚಕ್ರ ವಾಹನ ಸಂಃ ಕೆಎ 09 ಇಜೆ 0676 ರಲ್ಲಿ ಹೋಗಿ , ಉದಯಗಿರಿ ಠಾಣಾ ಸರಹದ್ದಿನ ಎಂ.ಜಿ. ರಸ್ತೆಯಲ್ಲಿರುವ ಶ್ರೀ ವಿನಾಯಕ ಟೀ ಸ್ಟಾಲ್ ಮುಂಭಾಗ ಹಾಕಿದ್ದ ಬೆಂಚಿನ ಮೇಲೆ ಕುಳಿತು ಟೀ ಕುಡಿಯುತ್ತಾ ದಿನ ಪತ್ರಿಕೆ ಓದುತ್ತಿದ್ದ ರಾಜು @ ಆರ್.ಎಸ್.ಎಸ್. ರಾಜುವನ್ನು ಕೊಲೆ ಮಾಡಿದ್ದು, ನಂತರ 1 ನೇ ಆರೋಪಿಯಾದ ನೀವು ಅದೇ ದಿನ 9 ನೇ ಆರೋಪಿಯ ಮನೆ ಬಳಿ ಹೋಗಿದ್ದು ರಾಜು @ ಆರ್.ಎಸ್.ಎಸ್. ರಾಜುವನ್ನು ಕೊಲೆ ಮಾಡಿರುವ ವಿಚಾರವನ್ನು ತಿಳಿಸಿದಾಗ 9 ನೇ ಆರೋಪಿಯು ಪ್ರೋತ್ಸಾಹಿಕವಾಗಿ ಹಾಗೂ ಖರ್ಚಿಗಾಗಿ 5000/- ರೂ ಹಣವನ್ನು ನೀಡಿದ್ದು, ಅದೇ ಕಾರಣ ಆರೋಪಿಗಳಾದ ನೀವುಗಳು ರಾಜು @ ಆರ್.ಎಸ್.ಎಸ್. ರಾಜು ಕೊಲೆಗೆ ಅಪರಾಧಿಕ ಒಳಸಂಚು ನಡೆಸಿ, ಚಿತಾವಣೆ ಮಾಡಿ ರಾಜು @

ಆರ್.ಎಸ್.ಎಸ್. ರಾಜುವನ್ನು ಕೊಲೆ ಮಾಡಿದ್ದು, ಅದೇ ಕಾರಣ ಆರೋಪಿಗಳಾದ ನೀವುಗಳು ಭಾ.ದಂ.ಸಂ. ಕಲಂ 120(ಬಿ) ಸಹವಾಚಕ 34 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ಆರೋಪಿಗಳಾದ ನೀವುಗಳು ನನ್ನಿಂದ ಈ ದಿನ ದಿನಾಂಕ 05.04.2023 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಎಸ್.ಟಿ. ದೇವರಾಜ )<br>
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ<br>
ನ್ಯಾಯಾಧೀಶರು, ಮೈಸೂರು.